


### ಮುದ ನೀಡಿದ ಗುಲಾಬಿ

ಗುಲಾಬಿಯ ಮುಖಪುಟ ಹೊತ್ತು ಬಂದ ಮುಖಪುಟ ಮುದ ನೀಡಿತು. ಗುಲಾಬಿ ಕೃಷಿಯ ಬಗೆಗೂ ಮಾಹಿತಿ ನೀಡಿದ ಗಾಣಧಾಳು ಶ್ರೀಕಂಠ ಅವರ ಲೇಖನ ಕೃಷಿಕರು ಈ ಬಗೆಗೆ ಆಸಕ್ತಿ ವಹಿಸುವಂತೆ ಮಾಡುವಲ್ಲಿ ಸಫಲವಾಗಿದೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಡಿ.ಎಲ್.ನಾಗರಾಜ್, ಚನ್ನಗಿರಿ/ ಬಿ.ಎಸ್. ನಾರಾಯಣಸ್ವಾಮಿ, ಬೋಧನ ಹೊಸಹಳ್ಳಿ/ ಬಿ.ಎಸ್.ರಮೇಶ್, ಬೆಂಗಳೂರು

### ಅರ್ಥಪೂರ್ಣ ಬರಹ

'ಗುಬ್ಬಿಗೊಂದು ದಿನ...' ಕಿರಣ್ ವಟಿ ಮಂಗಳೂರರ ಚಿತ್ರ–ಬರಹ 'ಪುಟ್ಟ ಗುಬ್ಬಿಗಳು' ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಸಮಯೋಚಿತ, ಅರ್ಥಪೂರ್ಣ. ಮೊಹಮ್ಮದ್ ದಿಲಾವರ್ ಸ್ಥಾಪಿಸಿರುವ 'ನೇಚರ್ ಫಾರ್ ಎವರ್ ' ಗುಬ್ಬಿ ಸಂರಕ್ಷಣೆಗೆ ಮಾಡುತ್ತಿರುವ ಪ್ರಯತ್ನ ಶ್ಲಾಘನೀಯ.

-ಎಂ.ಎಲ್. ಲಕ್ಷ್ಮಣ್‌ರಾವ್, ಬಿ.ಸಿದ್ದಲಿಂಗಪ್ಪ, ದಾವಣಗೆರೆ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ನಾರಾಯಣ ಯಾಜಿ, ಶಿರಾಲಿ

### ನವೋಲ್ಲಾಸದ ನಯಾಗರಾ

ಪ್ರತಿವರ್ಷ 12 ದಶಲಕ್ಷ ಯಾತ್ರಿಕರನ್ನು ಆಕರ್ಷಿಸುತ್ತಿರುವ ಅಮೆರಿಕದ ನಯಾಗರಾ ಜಲಪಾತದ ಕುರಿತು ಮಂಜುಳಾ ರಾಜ್ ಪರಿಚಯ ಲೇಖನ ಚೆನ್ನಾಗಿದೆ. ಚಿತ್ರಗಳು ಮನಸೆಳೆದವು. ಆದರೆ ಸೂಕ್ತ ಶೀರ್ಷಿಕೆಗಳಿಲ್ಲದಿರುವುದು ಕೊರತೆ!

-ಎಸ್. ಚನ್ನಪ್ಪ, ಮೈಸೂರು/ ತೊರಗಲ್ಲ ಉಮೇಶ್, ರಾಮದುರ್ಗ/ ಮೊಳಕಾಲ್ಮೂರು ಸುರೇಶ್, ಬಳ್ಳಾರಿ

### ಭಾರತೀಯರಿಗೆ ಕೀಳರಿಮೆ ಇಲ್ಲ

ನಾನು ಭಾರತದ ಉದ್ದಗಲಕ್ಕೂ ಸಂಚರಿಸಿದ್ದೇನೆ. ಅನೇಕ ನದಿ, ಜಲಪಾತಗಳಿಗೆ ಹೋಗಿ ಬಂದಿದ್ದೇನೆ. ಆದರೆ ಮಂಜುಳ ರಾಜ್ ನಯಾಗರಾ ಜಲಪಾತದ ಬರಹದಲ್ಲಿ ಹೇಳುವಂತೆ ನಾವು ಭಾರತೀಯರು ಎಲ್ಲಿಯೂ ಗಲೀಜು ಮಾಡಿ ಬರುವುದಿಲ್ಲ. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿಸಿಂಗ್ ಯಾವಾಗಲೂ ಈ ಮಾತು ಹೇಳುತ್ತಿರುತ್ತಾರೆ: 'ಭಾರತೀಯರು ಅಲ್ಲಲ್ಲೇ ಹರಿಯುವ ತೊರೆಯ ನೀರು ಕುಡಿದು, ಮರೆಯಲ್ಲೆಲ್ಲೊ ಬಹಿರ್ದೆಶೆ ಮುಗಿಸಿ (ಅದು ಎರಡು ದಿನಕ್ಕೆ ಗೊಬ್ಬರವಾಗುವುದು ಮಂಜುಳಾರವರಿಗೆ ತಿಳಿದಿರಲಿ) ಎಲ್ಲೂ ಪ್ಲಾಸ್ಟಿಕ್ ಬಿಸಾಡದೆ ಬರುತ್ತಾರೆ. ಆದರೆ ವಿದೇಶಿಯರು ಬಂದರೆ ಅವರ ನೀರಿನ ಅಬ್ಬರ, ಅವರು ಚೆಲ್ಲಾಡುವ ಪ್ಲಾಸ್ಟಿಕ್, ಹಿಮಾಲಯದ ಶಿಖರಗಳಲ್ಲಿ ಅವರು ಎಸೆಯುವುದು ಶಾಶ್ವತವಾದ ಕಸ' ಎನ್ನುತ್ತಾರೆ ಅವರು. ಮಂಜುಳಾ ರಾಜ್ ಎಲ್ಲರನ್ನೂ ತಮ್ಮ ತಕ್ಕಡಿಯಲ್ಲೇ ಅಳೆಯಬಾರದು!

-ಎಲ್. ರಮೇಶ್, ಬೆಂಗಳೂರು

### ಉಪಯುಕ್ತ ಮಾಹಿತಿ

ಬ್ಯಾಟರಿ ಸ್ಕೂಟರಿನ ಬಗ್ಗೆ ಜಿ.ವಿ. ಗಣೇಶಯ್ಯ ಅವರು ಸಮರ್ಥವಾಗಿ ವಿವರಿಸಿದ್ದಾರೆ.

-ಎಸ್. ನಿತ್ಯ, ಮೂಡಬಿದಿರೆ

### ಸೊಗಸಾದ ಬರಹ

ಡಾ. ವಸುಂಧರಾ ಭೂಪತಿಯವರ 'ಋತುಬಂಧದ ಕಾಲ' ಸೊಗಸಾಗಿ ಮೂಡಿಬಂದಿದೆ. ಒಳ್ಳೆಯ ಮಾಹಿತಿ ನೀಡಿದೆ.

-ಗೀತಾ ರುದ್ರಗೌಡ ಪಾಟೀಲ್, ಪೃಥ್ವೇಶ್ವರ

### ಹತ್ತು ಸಲ ಓದಿದೆ

ಪ್ರೇಮಾ ಭಟ್ ಅವರ 'ಪಯಣದ ದಾರಿಯಲ್ಲಿ' ಕಥೆಯ ಕೊನೆಯ ಎರಡು ಪ್ಯಾರಾಗಳನ್ನು ಹತ್ತತ್ತು ಸಲ ಓದಿದೆ. ವಾಣಿಶ್ರೀಯ ಕಣ್ಣಿನಿಂದ ಎರಡು ಹನಿ ಪತ್ರದ ಮೇಲೆ ಬಿದ್ದಂತೆ, ನನ್ನ ಕಣ್ಣಿನಿಂದಲೂ ಎರಡು ಹನಿ 'ಸುಧಾ' ಪತ್ರಿಕೆಯ ಹಾಳೆಯ ಮೇಲೆ ಬಿತ್ತು, ಎಂದರೆ ನಂಬುತ್ತೀರಾ?

-ನೇ.ಗೋ.ಭ., ಕುಕ್ಕೆಸುಬ್ರಹ್ಮಣ್ಯ

### ಅಸ್ಪಷ್ಟ ಸಂದೇಶ

'ಪಯಣದ ದಾರಿಯಲ್ಲಿ' ಕಥೆಯಲ್ಲಿ ಒಳ್ಳೆಯ ಸಂಸ್ಕಾರ, ಶಿಕ್ಷಣ ಪಡೆದರೂ ದಾರಿಯಲ್ಲಿ ಸಿಕ್ಕ ಸಾಕು ಮಗಳು ಓಡಿ ಹೋದದ್ದು 'ನಾಯಿಬಾಲ ಡೊಂಕು' ಎಂದಂತಾಯಿತಲ್ಲವೆ? ಗಂಡನ ಇಚ್ಛೆಯಂತೆ ಬಳಗದವರ ಮಗಳನ್ನು ಪೋಷಿಸಿ ಬೆಳೆಸಿದ್ದರೆ, ಈ ರೀತಿ ಅನ್ಯಜಾತಿಯವನೊಡನೆ ಓಡಿ ಹೋಗುತ್ತಿರಲಿಲ್ಲವೆ? ಏನೋ ಗೊತ್ತಿಲ್ಲ?

-ಗೋಪಾಲ ಆಶ್ರಿತ, ಬೆಂಗಳೂರು

### ಇಷ್ಟವಾದ ಕಥೆಗಳು

ಪ್ರೇಮಾ ಭಟ್‌ರ 'ಪಯಣದ ಹಾದಿಯಲ್ಲಿ' ಚಿಕ್ಕದಾದರೂ ಚೊಕ್ಕದಾದ ಕಥೆ. ಎಂ.ಈಶ್ವರಪ್ಪ ಮತ್ತಿಹಳ್ಳಿಯವರ 'ಪಂಗನಾಮ' ಒಂದು ತುಂಟ ಕಥೆಯಂತಿದೆ. ಎರಡೂ ಕಥೆಗಳು ಖುಷಿ ಕೊಟ್ಟವು.

-ಕೊಹಿಮ, ಬಸರಕೋಡು

### ಇವು ನಿಜಕ್ಕೂ ಮುತ್ತು

'ಸುಧಾ'ದಲ್ಲಿ ಪ್ರಕಟವಾಗುವ 'ಮಾತೇ ಮುತ್ತು' ಆಕರ್ಷಕ, ಪಂಚಿಂಗ್ ಹಾಗೂ ಅನುಭವಜನ್ಯ. ಜೀವನದ ಬಗ್ಗೆ ಸಕಾರಾತ್ಮಕ ನಿಲುವು ತಳೆಯುವಂತಿವೆ. ತಮಾಷೆಯಾಗಿಯೂ ಇರುತ್ತವೆ. ನಿತ್ಯ ನಾನು ಹತ್ತಾರು ಮಂದಿಗೆ ನುಡಿಮುತ್ತು ಕಳಿಸುತ್ತೇನೆ. ಅದರಲ್ಲಿ ಮಾತೇ ಮುತ್ತುನಿಂದ ಸಾಕಷ್ಟು ಅಣಿಮುತ್ತುಗಳನ್ನು ಬಳಸಿಕೊಳ್ಳುತ್ತೇನೆ.

-ಸತ್ಯಬೋಧ, ಬೆಂಗಳೂರು

### ಸಿನಿಕರ ಸಿಡುಕು!

ಮನಸ್ಸು ಹಗುರ ಮಾಡಿಕೊಳ್ಳಲು 'ನೀವು ಕೇಳಿದಿರಿ' ಅಂಕಣದ ಉತ್ತರಗಳು ಸಹಕಾರಿಯಾಗಿವೆ. ಗಣ್ಯ ವ್ಯಕ್ತಿಗಳು ವ್ಯಂಗ್ಯ ಚಿತ್ರ, ಅಣಕು ಬರಹಗಳನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸುತ್ತಾರೆ ಎಂದು ಕೇಳಿದ್ದೇನೆ. ಈ ತುಂಟ ಉತ್ತರಗಳಿಗೆ ಕೆಲವರು ಸಿಡುಕುವುದನ್ನು ನೋಡಿದರೆ ಅದು ಅವರ ಸಿನಿಕತನದ ದ್ಯೋತಕ ಎಂದು ನಕ್ಕು ಸುಮ್ಮನಾಗಬೇಕು, ಅಷ್ಟೇ.

-ಹಾಡ್ಯ ಬಿ.ಜಯಾನಂದ, ಮೈಸೂರು






ಗುಂಡ: 'ಮುಂದಿನ ವರ್ಷ ನನ್ನ ಅಳಿಯ ಕಾರಲ್ಲೇ ಓಡಾಡುತ್ತಾನೆ ಅಂತ ತಾವು ಕಳೆದ ವರ್ಷ ಹೇಳಿದ್ದು ನಿಜ ಆಗಿದೆ'

ಜ್ಯೋತಿಷಿ: 'ನೋಡಿದ್ರಾ ನನ್ನ ಮಾತು ಎಂದಿಗೂ ಸುಳ್ಳಾಗೊಲ್ಲ! ಮೊದಲಿನ ಸ್ಕೂಟರ್ ಇದೆ ತಾನೆ!'

ಗುಂಡ; 'ಇಲ್ಲ! ಸಾಲಗಳು ಜಾಸ್ತಿ ಆಗಿ ಮನೆ ಸ್ಕೂಟರ್ ಎಲ್ಲವನ್ನೂ ಮಾರಿ ಈಗ ಯಾರದೋ ಕಾರಿಗೆ ಬಾಡಿಗೆ ಡ್ರೈವರ್ ಆಗಿದ್ದಾನೆ'

★★★




ಮಗ: ಯಾಕಪ್ಪ ನೀನು ನಮ್ಮ ಮನೆ ಫೋನ್‌ನ ನೆಲದಲ್ಲಿ ಹೂಳ್ತಾ ಇದೀಯಾ?

ಮಂಟಾ: ಮೆಕ್ಯಾನಿಕ್ ಬಂದು ನಮ್ಮ ಫೋನ್ ಡೆಡ್ ಆಗಿದೆ ಅಂದ. ಅದಕ್ಕೆ!

***

ತಾಯಿ: 'ನನ್ನ ಮಗ ಒಂದು ಬಾಟಲಿ ಪೂರ್ತಿ ಇಂಕು ಕುಡಿದು ಬಿಟ್ಟಿದ್ದಾನೆ'

ಡಾಕ್ಟರ್: 'ಏನು ಒಂದು ಗಂಟೆಯಾಯಿತಾ? ಇಷ್ಟು ಹೊತ್ತು ನೀವೇನು ಮಾಡ್ತಿದ್ರಿ?

ತಾಯಿ: 'ಇನ್ನೇನು ಮಾಡೋಕೆ ಆಗುತ್ತೆ? ಪೆನ್ಸಿಲ್‌ನಲ್ಲಿ ಬರೀತಾ ಇದ್ದೆ!

■ ಸಂಗ್ರಹ: ಎಂ.ಕೆ.ಮಂಜುನಾಥ್